
‘ಮನುಷ್ಯ ಒಂದು ಕಡೆ ನಿಲ್ಲೋ ಸ್ವಭಾವದವನಲ್ಲ. ಅವನ ಓಡಾಟಗಳಿಗೆ ಕೊನೆಯೇ ಇಲ್ಲ. ನನ್ನನ್ನೇ ತಗೋ ಬಾಳೆಬೈಲು ಬಿಟ್ಟು ಕೊಪ್ಪಕ್ಕೆ ಓದೋಕೆ ಬಂದೆ. ಸರ್ಕಾರಿ ಕೆಲಸ ಸಿಕ್ಕಲಿಲ್ಲ. ಊರಲ್ಲಿ ಇರೋಕೆ ಇಷ್ಟ ಇರಲಿಲ್ಲ ಅಂತ ಅಪ್ಪ ಅಮ್ಮನಿಗೂ ಹೇಳದೆ ಮುಂಬಯಿಗೆ ಹೋದೆ. ಅಲ್ಲಿ ಏನೇನೋ ಕೆಲಸಗಳನ್ನು ಮಾಡಿದೆ. ದುಡ್ಡು ಹೊಂದಿಸಿಕೊಂಡು ಸಣ್ಣ ಕಾಫಿ ಹೋಟೆಲ್ ಶುರು ಮಾಡಿದೆ. ಹಗಲು ರಾತ್ರಿ ದುಡಿದೆ. ದುಡ್ಡು ಸೇರ್ತಾಹೋಯ್ತು. ನನ್ನ ಮಕ್ಕಳಿಬ್ಬರೂ ಬುದ್ದಿವಂತರು. ಚೆನ್ನಾಗಿ ಓದಿದರು. ಅವರಿಗೂ ನನ್ನ ಹಾಗೆ ದುಡ್ಡು ಮಾಡುವ ಉಮೇದು. ದೊಡ್ಡ ಮಗ ತನ್ನ ಫ್ರೆಂಡ್ಸ್‌ಗಳ ಜತೆ ಸೇರಿ ಸಾಫ್ಟ್‌ವೇರ್ ಕಂಪನಿ ಶುರು ಮಾಡಿ ಚೆನ್ನಾಗಿ ಬೆಳೆದ. ನಾನು ನನ್ನದೇ ಒಂದು ಕನ್‌ಸ್ಟ್ರಕ್ಷನ್ ಕಂಪೆನಿ ಶುರು ಮಾಡಿದೆ. ಅದಕ್ಕೆ ನಾನೇ ಚೇರ್ಮನ್. ಸಣ್ಣ ಮಗ ಹೋಟೆಲ್, ಷೇರು ವ್ಯವಹಾರ ಮಾಡ್ತಾನೆ. ಕಳ್ಳ ಲೆಕ್ಕ ತೋರಿಸಿದ ಮೇಲೂ ನಾವು ವರ್ಷಕ್ಕೆ ಐದಾರು ಕೋಟಿ ಇನ್‌ಕಂ ಟ್ಯಾಕ್ಸ್ ಕಟ್ತೀವಿ!. ಮಕ್ಕಳ ಖಜಾನೆ ಅಕ್ಷಯವಾಗುತ್ತಲೇ ಇದೆ. ಸಣ್ಣ ಮಗ ದುಬೈನಲ್ಲಿ ಹೋಟೆಲ್ ಖರೀದಿ ಮಾಡಬೇಕು ಅಂತ ಓಡಾಡ್ತಿದ್ದಾನೆ....’

ನಾನು ಮತ್ತೆ ಬಾಳೆಬೈಲಿಗೆ ಬಂದದ್ದು ನನ್ನ ಮದುವೆ ಆದ ಮೇಲೆ. ಅಮ್ಮ ಸತ್ತಿದ್ದೂ ನಂಗೆ ಗೊತ್ತೇ ಆಗಲಿಲ್ಲ. ನಾನು ಊರಿಗೆ ಬರುವಷ್ಟರಲ್ಲಿ ಅಪ್ಪಯ್ಯ ದೈಹಿಕವಾಗಿ, ಆರ್ಥಿಕವಾಗಿ ಮೆತ್ತಗಾಗಿದ್ದರು. ನಾನು ಸತ್ತೇ ಹೋಗಿದ್ದೀನಿ ಅಂದ್ಕೊಂಡಿದ್ದರಂತೆ! ಮುಂಬೈ ಸಹವಾಸ ಸಾಕು. ಊರಿಗೆ ಬಂದು ನಮ್ಮ ಜತೆ ಇದ್ದು ಬಿಡು ಅಂತ ತುಂಬಾ ಒತ್ತಾಯ ಮಾಡಿದರು. ಮುಂಬೈಯಲ್ಲಿರೋ ನನ್ನ ವ್ಯವಹಾರಗಳನ್ನು ವಿವರಿಸಿದ ಮೇಲೆ ಸುಮ್ಮನಾದರು. ನನ್ನ ಪಾಲಿಗೆ ಬಂದ ಜಮೀನನನ್ನು ಚಿದಂಬರನಿಗೆ ಕೊಟ್ಟಿದ್ದೇನೆ. ಬಾಳೆಬೈಲಿನ ಮನೆ ನನ್ನ ಹೆಸರಲ್ಲಿದೆ...’

‘ನನ್ನ ಸೊಸೆಯರಿಬ್ಬರೂ ಉತ್ತರ ಭಾರತದವರು. ಒಬ್ಬಳು ದೆಹಲಿಯವಳು. ಇನ್ನೊಬ್ಬಳು ಲಕ್ನೋದವಳು. ಇಬ್ಬರ ಪೇರೆಂಟ್ಸ್ ಇರೋದು ಮುಂಬೈನಲ್ಲಿ. ಅವರೂ ಸ್ಥಿತಿವಂತರು. ನಾನು ನನ್ನ ಹೆಂಡ್ತಿ, ನನ್ನ ಮಕ್ಕಳು ಅವರ ಕುಟುಂಬ ಒಂದೇ ಏರಿಯಾದಲ್ಲಿ ಬೇರೆ ಬೇರೆ ಲಕ್ಷುರಿ ಅಪಾರ್ಟ್‌ಮೆಂಟ್ನಲ್ಲಿ ಇದೀವಿ. ದೊಡ್ಡವನಿಗೆ ಒಬ್ಬನೇ ಮಗ. ಎರಡನೆಯವನಿಗೆ ಇಬ್ಬರು ಹೆಣ್ಣು ಮಕ್ಕಳು. ಇಬ್ಬರೂ ತುಂಬಾ ಲಕ್ಷಣವಾಗಿದ್ದಾರೆ. ಮೊಮ್ಮಕ್ಕಳೂ ಬುದ್ದಿವಂತರು. ದೊಡ್ಡ ಮಗನ ಮನೆಯಲ್ಲಿ ಮಾಂಸದಡುಗೆ ಮಾಡಿಕೊಂಡು ತಿಂತಾರೆ! ಸಣ್ಣವನು ಶುದ್ಧ ಸಸ್ಯಾಹಾರಿ. ಆದರೆ ಅವನ ಹೆಂಡ್ತಿ ಬೀಫ್ ತಿಂತಾಳೆ! ಇದು ಗೊತ್ತಾದ ಮೇಲೆ ನಾವು ಮಕ್ಕಳ ಮನೆಯಲ್ಲಿ ಊಟ ಮಾಡೋದನ್ನು ನಿಲ್ಲಿಸಿದ್ವಿ. ವಾರಕ್ಕೊಂದ್ಸಲ ಎಲ್ಲರೂ ಹೊರಗೆ ವೆಜ್ ರೆಸ್ಟೋರೆಂಟಿಗೆ ಊಟಕ್ಕೆ ಹೋಗ್ತೀವಿ. ನಮ್ಮ ನಡುವೆ ಇರೋದು ಬರೀ ಹಣಕಾಸಿನ ಸಂಬಂಧ ಅಷ್ಟೇ...’



ಇಷ್ಟೇ ಕಣಯ್ಯ ಜೀವನ. ನಾನಿನ್ನೂ ಊರು, ಮನೆ, ಕುಲದೇವರು, ಹಿರಿಯರ ಜಮೀನು ಅಂತ ಭಾವುಕರಾಗ್ತಿದ್ದೀನಿ. ಊರಿನ ನಂಟು, ಸಂಬಂಧಿಕರು, ಕುಲದೇವರ ಹರಕೆ, ಪೂಜೆ, ಪುನಸ್ಕಾರಗಳು ನನ್ನ ಕಾಲಕ್ಕೆ ಕೊನೆ ಆಗ್ತವೆ ಅನ್ನಿಸ್ತಿದೆ ಎಂದು ಹೇಳಿ ನಿಟ್ಟುಸಿರುಬಿಟ್ಟ.

ಎಲ್ಲಾ ವ್ಯವಹಾರಗಳನ್ನು ಮಕ್ಕಳಿಗೆ ವಹಿಸಿ ನಾವು ಬಾಳೆಬೈಲಿಗೆ ಹೋಗಿ ಇದ್ದು ಬಿಡೋಣ ಅಂತ ಹೆಂಡ್ತಿಗೆ ಹೇಳಿದೆ. ಅವಳು ನಾನು ಮುಂಬೈ ಬಿಟ್ಟು ಎಲ್ಲಿಗೂ ಬರಲ್ಲ ಅಂತಾಳೆ. ಅವಳು ಹುಟ್ಟಿ, ಬೆಳೆದಿದ್ದು ಮುಂಬೈನಲ್ಲೇ, ಅವಳಪ್ಪ ನನ್ನಂತೆ ಕೆಲಸ ಹುಡುಕಿಕೊಂಡು ಮುಂಬೈಗೆ ಬಂದವರು. ಕೊನೆಗಾಲದಲ್ಲಿ ನಮ್ಮನ್ನು ಯಾರು ನೋಡಿಕೊಳ್ತಾರೆ ಅಂತ ಕೇಳ್ತಾಳೆ? ಕೊಪ್ಪದಲ್ಲಿ ಚಿದಂಬರ ಇದ್ದಾನೆ. ಅವನ ಮಕ್ಕಳಿದ್ದಾರೆ. ಕೊಪ್ಪದಲ್ಲಿ ದೊಡ್ಡ ಆಸ್ಪತ್ರೆಗಳಿವೆ. ಮಣಿಪಾಲ ಹತ್ತಿರದಲ್ಲೇ ಇದೆ ಎಂದು ಹೇಳಿದರೂ ಅವಳಿಗೆ ನಂಬಿಕೆ ಬರ್ತಿಲ್ಲ. ನನ್ನ ಅಸಹಾಯಕತೆ ನಿಂಗೆ ಅರ್ಥ ಆಗಬಹುದು ಎನ್ನುತ್ತ ವಿಶ್ವನ ಮುಖ ನೋಡಿದ.

‘ಅಪ್ಪಯ್ಯ ಈಚೆಗೆ ಪದೇ ಪದೇ ಕನಸಿನಲ್ಲಿ ಕಾಣಿಸಿಕೊಳ್ತಾರೆ. ಕನಸಿನಲ್ಲೂ ಅವರು ನನ್ನ